# ವಿಶ್ವ ದರ್ಶನ

ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ

08-11-2025 | ಶನಿವಾರ ಸಂಪುಟ-3 ಸಂಚಿಕೆ-4 ಪುಟಗಳು-2


**ನುಡಿಮುತ್ತು**

" ನಿಜವಾದ ಶಿಕ್ಷಣವು ಕೇವಲ ಪುಸ್ತಕಗಳಲ್ಲಿ ಇರುವುದಲ್ಲ : ಅದು ವ್ಯಕ್ತಿತ್ವವನ್ನು ರೂಪಿಸುವ ಶಕ್ತಿ."

– ಸ್ವಾಮಿ ವಿವೇಕಾನಂದ

# ವಿಶ್ವಕಪ್ ಗೆದ್ದ ವೀರವನಿತೆಯರು




**52 ವರ್ಷಗಳ ತಪಸ್ಸಿಗೆ ಜಯ**

1973 ರಲ್ಲಿ ಈ ಏಕದಿನ ವನಿತೆಯರ ವಿಶ್ವಕಪ್ ಆರಂಭವಾಗಿತ್ತು. ಭಾರತ ವನಿತೆಯರ ತಂಡ 2005 ಮತ್ತು 2017ರಲ್ಲಿ 2 ಭಾರಿ ಏಕದಿನ ವಿಶ್ವಕಪ್ ಫೈನಲ್ ಗೆ ಏರಿತ್ತು. ಆದರೆ ಒಮ್ಮೆ ಕೂಡ ವಿಶ್ವಕಪ್ ಎತ್ತಿ ಹಿಡಿಯಲು ಸಾಧ್ಯವಾಗಿರಲಿಲ್ಲ. ಕಳೆದ ವಿಶ್ವಕಪನಲ್ಲಿಯೂ ಸೆಮಿಫೈನಲ್‌ನಲ್ಲಿ ಆಸಿಸ್ ವಿರುದ್ಧ ಪರಾಭವಗೊಂಡು ಕಪ್ ಕನಸಿಗೆ ಕೊಳ್ಳಿ ಬಿದ್ದಿತ್ತು. ಆದರೆ ಈ ಭಾರಿ ಸೆಮಿಫೈನಲ್‌ನಲ್ಲಿ ಬಲಾಢ್ಯ ಆಸಿಸ್ ಪಡೆ ಮಣಿಸುವ ಮೂಲಕ ಭಾರತದ ನಾರಿಪಡೆ 3ನೇ ಬಾರಿಗೆ ಫೈನಲ್‌ಗೆ ಹೆಜ್ಜೆ ಹಾಕಿ ಚೊಚ್ಚಲ ವಿಶ್ವಕಪ್ ತನ್ನ ಮುಡಿಗೇರಿಸಿಕೊಂಡಿತು.

ಚೊಚ್ಚಲ ಬಾರಿಗೆ ಏಕದಿನ ವಿಶ್ವಕಪ್ ಎತ್ತಿ ಹಿಡಿದ ಭಾರತದ ವನಿತೆಯರ ತಂಡ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. 52 ವರ್ಷಗಳ ಮಹಾ ತಪಸ್ಸಿಗೆ 52 ರನ್ ಗಳಿಂದ ಗೆಲ್ಲುವ ಮೂಲಕವೇ ಇತಿಹಾಸ ಸೃಷ್ಟಿಸಿದ್ದಾರೆ. ಯಂಗ್ ಜನರೇಷನ್ ಕೋಟ್ಯಾಂತರ ಹೆಣ್ಣು ಮಕ್ಕಳಿಗೆ ಕೂಡಾ ಕ್ರೀಡಾ ಸ್ಫೂರ್ತಿಯಾಗಿದ್ದಾರೆ. ನವೆಂಬರ 2 ಭಾನುವಾರ ಭಾರತೀಯರ ಪಾಲಿಗೆ ಇನ್ನೆಂದಿಗೂ ಮರೆಯಲಾಗದಂತಹ ದಿನ. ನವಿ ಮುಂಬೈನ ಡಿ.ವೈ ಪಾಟೀಲ್ ಕ್ರೀಡಾಂಗಣದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಐಸಿಸಿ ಹೆಣ್ಣುಮಕ್ಕಳ ವಿಶ್ವಕಪ್‌ನಲ್ಲಿ ಭಾರತ ಗೆದ್ದು ಬೀಗಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ವೀರ ವನಿತೆಯರು ನಿಗದಿತ 50 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 298 ರನ್‌ಗಳನ್ನು ಕಲೆಹಾಕಿದ್ದರು. ಹರಿಣಗಳ ನಾಡಿನ ಆಟಗಾರ್ತಿಗಳಿಗೆ 299 ಟಾರ್ಗೆಟ್‌ನ್ನ ನೀಡಿದ್ದರು. ಈ ಗುರಿ ಬೆನ್ನಟ್ಟಿದಂತಹ ದಕ್ಷಿಣ ಆಫ್ರಿಕಾ ತಂಡ 45.3 ಓವರ್‌ಗಳಲ್ಲಿ ತನ್ನ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 246 ರನ್‌ಗಳನ್ನು ಕಲೆ ಹಾಕಲಷ್ಟೇ ಸಾಧ್ಯವಾಯಿತು.

**ವಿಶ್ವಕಪ್ ಪ್ರಯಾಣ**

| ಹಂತ | ಎದುರು | ಫಲಿತಾಂಶ |
|---|---|---|
| ಲೀಗ್ | ಶ್ರೀಲಂಕಾ | 59 ರನ್ ಜಯ |
| ಲೀಗ್ | ಪಾಕಿಸ್ತಾನ | 88 ರನ್ ಜಯ |
| ಲೀಗ್ | ದಕ್ಷಿಣಆಫ್ರಿಕಾ | 3 ವಿಕೆಟ್ ಸೋಲು |
| ಲೀಗ್ | ಆಸ್ಟ್ರೇಲಿಯಾ | 3 ವಿಕೆಟ್ ಸೋಲು |
| ಲೀಗ್ | ಇಂಗ್ಲೆಂಡ್ | 4 ರನ್ ಸೋಲು |
| ಲೀಗ್ | ನ್ಯೂಸಿಲ್ಯಾಂಡ್ | 53 ರನ್ ಜಯ |
| ಲೀಗ್ | ಬಾಂಗ್ಲಾ | ಪಂದ್ಯ ರದ್ದು |
| ಸೆಮಿಸ್ | ಆಸ್ಟ್ರೇಲಿಯಾ | 5 ವಿಕೆಟ್ ಜಯ |
| ಫೈನಲ್ | ದ. ಆಫ್ರಿಕಾ | 52 ರನ್ ಜಯ |

**ಭಾರತದ ಗೆಲುವಿಗೆ ಕಾರಣಗಳು**

- ಸ್ಮೃತಿ ಮತ್ತು ಶಫಾಲಿ ಶತಕದ ಜೊತೆಯಾಟ
- ಬ್ಯಾಟಿಂಗನಲ್ಲಿ ಪ್ರತಿಯೊಬ್ಬರ ಕೊಡುಗೆ
- ದೀಪ್ತಿ ಶರ್ಮಾರವರ ಆಲ್ ರೌಂಡ್ ಪ್ರದರ್ಶನ
- ಹೋಮ್ ಪಿಚ್ ಆಂಡ್ ಹೋಮ್ ಕ್ರೌಡ್
- ಸೌತ್ ಆಫ್ರಿಕಾ ಪಾರ್ಟ್ನರ್ ಶಿಪ್ ಬ್ರೇಕ್

## ದೀಪ್ತಿ ಶರ್ಮಾ ಶಫಾಲಿ ವರ್ಮಾ ಆಲ್‌ರೌಂಡ್ ಆಟ








ಆರಂಭಿಕರಾಗಿ ಕಣಕ್ಕಿಳಿದ ಶಫಾಲಿ ವರ್ಮಾ 78 ಎಸೆತಗಳಲ್ಲಿ 87 ರನ್‌ಗಳನ್ನು ಕಲೆ ಹಾಕಿ ಔಟ್ ಆದರು. ಬೌಲಿಂಗ್ ನಲ್ಲಿ ಕೂಡಾ 2 ವಿಕೆಟ್ ಗಳನ್ನು ಉರುಳಿಸಿದರು. ಇನ್ನೂ ದೀಪ್ತಿ ಶರ್ಮಾರವರು ಆಟ ಅದ್ಭುತ. 5ನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ದೀಪ್ತಿ ಶರ್ಮಾ 58 ಎಸೆತಗಳಲ್ಲಿ 58 ರನ್ ಗಳಿಸಿದರು. ಅವರ ಈ ಆಟವು 3 ಬೌಂಡರಿ ಹಾಗೂ ಒಂದು ಸಿಕ್ಸರ್ ಒಳಗೊಂಡಿತ್ತು. ಬೌಲಿಂಗ್‌ನಲ್ಲಿಯೂ ಉತ್ತಮ ಪ್ರದರ್ಶನ ನೀಡಿದ ದೀಪ್ತಿ 9.3 ಓವರ್‌ಗಳಲ್ಲಿ 5 ವಿಕೆಟ್ ಕಬಳಿಸುವ ಮೂಲಕ ಭಾರತ ಚಾಂಪಿಯನ್ ಆಗುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಒಟ್ಟಾರೆ ಟೂರ್ನಿಯಲ್ಲಿ 22 ವಿಕೆಟ್ ಗಳನ್ನು ಪಡೆಯುವ ಮೂಲಕ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಟೂರ್ನಿಯುದ್ದಕ್ಕೂ ಅದ್ಭುತ ಆಟವಾಡಿದ ದೀಪ್ತಿ 9 ಪಂದ್ಯಗಳ 7 ಇನ್ನಿಂಗ್ಸಗಳಿಂದ 215 ರನ್‌ಗಳನ್ನು ಕಲೆಹಾಕಿದ್ದಾರೆ. ವಿಶ್ವಕಪ್ ಟೂರ್ನಿಯೊಂದರಲ್ಲಿ ಇದುವರೆಗೂ ಇಷ್ಟು ರನ್ ತೆಗೆದಿರಲಿಲ್ಲ, ಹಾಗೂ ವಿಕೆಟ್‌ನ್ನು ಯಾರು ಪಡೆದಿರಲಿಲ್ಲ. ಇದೇ ಕಾರಣಕ್ಕಾಗಿ ದೀಪ್ತಿ ಶರ್ಮಾರವರಿಗೆ ' ಸರಣಿ ಶ್ರೇಷ್ಠ ' ಗೌರವವನ್ನು ನೀಡಲಾಗಿದೆ. ಹಾಗೂ ಶಫಾಲಿ ವರ್ಮಾರಿಗೆ 'ಪಂದ್ಯ ಶ್ರೇಷ್ಠ' ಪ್ರಶಸ್ತಿ ಪಡೆದುಕೊಂಡರು.

## ಅಮೋಲ್ ಕೊಡುಗೆ ಅಮೂಲ್ಯ




2023ರ ಅಕ್ಟೋಬರ್‌ನಲ್ಲಿ ಭಾರತ ಮಹಿಳಾ ತಂಡದ ಕೋಚ್ ಪಟ್ಟವೇರಿದ್ದ ಮುಂಬೈನ ಅಮೋಲ್ ಮುಜುಮ್ದಾರ್ ಸರಿಯಾಗಿ 2 ವರ್ಷಗಳ ಬಳಿಕ ವಿಶ್ವಕಪ್ ವಿಜೇತರೇನಿಸಿದ್ದಾರೆ. ಕ್ರಿಕೆಟ್ ವೃತ್ತಿಜೀವನದಲ್ಲಿ ರನ್ ಮಳೆ ಹರಿಸಿದ ನಡುವೆಯೂ ಎಂದೂ ಭಾರತವನ್ನು ಪ್ರತಿನಿಧಿಸುವ ಅದೃಷ್ಟ ಇವರಿಗೆ ಒಲಿದಿರಲಿಲ್ಲ. 1988ರಲ್ಲಿ ಶಾಲಾ ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್– ವಿನೋದ ಕಾಂಬ್ಳಿ 664 ರನ್ ಜತೆಯಾಟವಾಡಿದಾಗ, ಮುಂದಿನ ಬ್ಯಾಟರ್ ಆಗಿದ್ದ ಅಮೋಲ್ 2 ದಿನ ಪೂರ್ತಿ ಪ್ಯಾಡ್ ಕಟ್ಟಿಕೊಂಡು ಬ್ಯಾಟಿಂಗ್‌ಗಾಗಿ ಕಾದಿದ್ದರು. 1993–94ರಲ್ಲಿ ರಣಜಿ ಟ್ರೋಫಿಯ ಪದಾರ್ಪಣೆ ಪಂದ್ಯದಲ್ಲಿ 260 ರನ್ ಸಿಡಿಸಿ 'ನ್ಯೂ ತೆಂಡೂಲ್ಕರ್' ಎಂಬ ಹೊಗಳಿಕೆ ಪಡೆದಿದ್ದರು. ಆದರೆ ನಂತರ 21 ವರ್ಷಗಳ ಕಾಲ ದೇಶೀಯ ಕ್ರಿಕೆಟ್‌ನಲ್ಲಿ ಆಡಿ 30 ಶತಕಗಳ ಸಹಿತ 11 ಸಾವಿರಕ್ಕೂ ಅಧಿಕ ರನ್‌ಗಳಿಸಿದ್ದರೂ, ಭಾರತ ಪರ ಆಡುವ ಅವಕಾಶ ಒಲಿದಿರಲಿಲ್ಲ. ಇದೀಗ ಆಟಗಾರ ಆಗಿ ಸಾಧ್ಯವಾಗದ್ದನ್ನು ಕೋಚ್ ಆಗಿ ಸಾಧಿಸುವ ಮೂಲಕ ಜಾಗತಿಕ ಮಟ್ಟದ ಮನ್ನಣೆ ಪಡೆದುಕೊಂಡಿದ್ದಾರೆ.

## ಕೊನೆಗೂ ಐಸಿಸಿ ಟ್ರೋಫಿಗೆ ಮುತ್ತಿಕ್ಕಿದ ಹರ್ಮನ್





ಟೀಮ್ ಇಂಡಿಯಾ ನಾಯಕಿಗೆ ಇದು ಬೆಲೆ ಕಟ್ಟಲಾಗದ ಟ್ರೋಫಿ. ತಮ್ಮ ಇಡೀ ಕರಿಯರ್ ನಲ್ಲಿ ಒಂದೇ ಒಂದು ಟ್ರೋಫಿ ಗೆಲ್ಲೋಕೆ ಸಾಧ್ಯವಾಗಿರಲಿಲ್ಲ. ಇದಕ್ಕೂ ಮೊದಲು 12 ಐಸಿಸಿ ಟೂರ್ನಿಯಲ್ಲಿ ಆಡಿದ್ದ ಹರ್ಮನ್ ಪ್ರೀತ್ ಕೌರ್‌ಗೆ ಒಂದು ಬಾರಿ ಕಪ್ ಗೆದ್ದಿರಲಿಲ್ಲ. 2009, 2013, 2017, 2022ರಲ್ಲಿ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಆಡಿದರು. 2009, 2010, 2012, 2014, 2016, 2018, 2020, 2023 ರಲ್ಲಿ ಟಿ20 ವಿಶ್ವಕಪ್‌ನಲ್ಲಿ ಭಾಗವಹಿಸಿದ್ದರು. ಆದರೂ ಯಾವುದೇ ಟ್ರೋಫಿ ಗೆದ್ದಿರಲಿಲ್ಲ. ಯಾವ ಐಸಿಸಿಯಲ್ಲಿ ಟ್ರೋಫಿ ಎತ್ತಿ ಹಿಡಿದಿರಲಿಲ್ಲ. ಅವ–ರಿಗೆ ಈ ಟ್ರೋಫಿ ವಿಶ್ವವನ್ನೇ ಗೆದ್ದ ಸಂಭ್ರಮದಲ್ಲಿ ತೇಲಾಡುವ ರೀತಿ ಮಾಡಿದೆ.

## ಸೋತರೂ ಜನಮನ ಗೆದ್ದ ನಾಯಕಿ

ದಕ್ಷಿಣ ಆಫ್ರಿಕಾ ತಂಡ ಸೋತರು ಕೂಡಾ ನಾಯಕಿ ಏಕಾಂಗಿಯಾಗಿ ಹೋರಾಡಿದರು. ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವಿಲ್ವಾಡ 101 ರನ್‌ಗಳ ಇನ್ನಿಂಗ್ಸ್‌ಗಳನ್ನು ಆಡಿದರು. ಮೊದಲ ಓವರ್ ನಿಂದಲೇ ಭಾರತೀಯ ಬೌಲರ್‌ಗಳನ್ನು ದಂಡಿಸಿದ ಲಾರಾ 98 ಎಸೆತಗಳಲ್ಲಿ ಶತಕಗಳನ್ನು ಪೂರೈಸಿದರು. 39 ಓವರ್‌ಗಳ ಮುಕ್ತಾಯದ ವೇಳೆಗೆ ದಕ್ಷಿಣ ಆಫ್ರಿಕಾ ತಂಡದ ಸ್ಕೋರ್ 200ರ ಗಡಿ ದಾಟಿತ್ತು. ಅವರ ಈ ಆಕರ್ಷಕ ಆಟದೊಂದಿಗೆ ಮೂವತ್ತೊಂಬತ್ತನೇ ಓವರ್‌ನಲ್ಲಿ ಇನ್ನೂರರ ಗಡಿ ದಾಟಿದ ಸೌತ್ ಆಫ್ರಿಕಾ ಗೆಲುವಿನ ನಿರೀಕ್ಷೆಯಲ್ಲಿತ್ತು. ಆದರೆ 42ನೇ ಓವರ್‌ನಲ್ಲಿ ದೀಪ್ತಿ ಎಸೆದ ಎಸೆತವನ್ನು ಲಾರಾ ವಿಲ್ವಾಡ್ ಮಿಡ್ ವಿಕೆಟ್‌ನತ್ತ ಹೊಡೆಯಲು ಹೋಗಿ ಅಮನ್ ಜೊತಕೋರ್‌ಗೆ ಕ್ಯಾಚ್ ನೀಡಿದರು. ಅಮನ್ ಒಂದೇ ಕೈಯಲ್ಲಿ ಹಿಡಿದ ಈ ಅದ್ಭುತ ಕ್ಯಾಚ್ ಪಂದ್ಯದ ಚಿತ್ರಣವನ್ನೇ ಬದಲಿಸಿತು. ಲಾರಾ ವಿಕೆಟ್ ಪತನದ ಬಳಿಕ ಬಂದ ಯಾವುದೇ ಆಟಗಾರ್ತಿಯರು ಉತ್ತಮ ಆಟವಾಡಲಿಲ್ಲ. ಅಂತಿಮವಾಗಿ ದಕ್ಷಿಣ ಆಫ್ರಿಕಾ 45.3 ಓವರ್‌ಗಳಲ್ಲಿ 246 ಗಳಿಸುವಷ್ಟೇ ಶಕ್ತವಾಗಿ 52 ರನ್‌ಗಳಿಂದ ಸೋಲನ್ನೊಪ್ಪಿಕೊಳ್ಳಬೇಕಾಯಿತು.

## ಸಶಸ್ತ್ರ ದಂಗೆಯ ಪಿತಾಮಹ ವಾಸುದೇವ್ ಫಡ್ಕೆ



ಎಲೆ ಮರೆ ಕಾಯಿಗಳಂತೆ ಕೆಲಸ ಮಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಸಿಗುವಂತೆ ಮಾಡಿದವರು ಅನೇಕ ಭಾರತೀಯರು ಇದ್ದಾರೆ. ಅಂತಹವರ ಸಾಲಿನಲ್ಲಿ ವಾಸುದೇವ ಬಲವಂತ ಫಡ್ಕೆ ಒಬ್ಬರು. " ಭಾರತೀಯ ಸಶಸ್ತ್ರ ದಂಗೆಯ ಪಿತಾಮಹ " ಎಂದೇ ಪ್ರಸಿದ್ಧಿಯಾಗಿದ್ದಾರೆ. ಅವರು ಭಾರತದ ಮೊದಲ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿದ್ದರು.

ವಾಸುದೇವ ಬಲವಂತ ಫಡ್ಕೆಯವರು 1845 ರ ನವೆಂಬರ್ 4 ರಂದು ಮಹಾರಾಷ್ಟದ ರಾಯಗಡ ಜಿಲ್ಲೆಯ 'ಶಿರ್ಡೋನೆ' ಎಂಬ ಹಳ್ಳಿಯಲ್ಲಿ ಜನಿಸಿದರು. ದಾದಾಬಾಯಿ ನವರೋಜಿ ಮತ್ತು ಎಂ.ಜಿ.ರಾನಡೆಯಂತಹ ನಾಯಕರ ಭಾಷಣಗಳನ್ನು ಕೇಳಿ ಸ್ಫೂರ್ತಿಗೊಂಡು ಸ್ವತಂತ್ರ ಹೋರಾಟದಲ್ಲಿ . ಸ್ವರಾಜ್ಯದ ಮಂತ್ರವನ್ನು ಬೋಧಿಸಲು ಮತ್ತು ವಿದೇಶಿ ಆಳ್ವಿಕೆಯ ವಿರುದ್ಧ ದಂಗೆ ಏಳಲು ಜನರನ್ನು ಪ್ರೋತ್ಸಾಹಿಸಲು ಹಳ್ಳಿಯಿಂದ ಹಳ್ಳಿಗೆ ಹೋದ ಮೊದಲ ಭಾರತೀಯ ನಾಯಕ.

ಬ್ರಿಟಿಷ್ ಆಳ್ವಿಕೆ ಕಾಲದಲ್ಲಿ ಬ್ರಿಟಿಷ್ ಉದ್ಯೋಗದಲ್ಲಿ ನ್ಯಾಯಯುತ ಗುಮಾಸ್ತರಾಗಿದ್ದರು. ಅವರ ತಮ್ಮ ಸಾಯುತ್ತಿರುವ ತಾಯಿ ಬಳಿ ಇರಲು ಮತ್ತು ನಂತರ ಅವರ ಮೊದಲ ಪುಣ್ಯತಿಥಿಯ ಆಚರಣೆಗಳಲ್ಲಿ ಭಾಗವಹಿಸಲು ರಜೆ ನೀಡಲು ಬ್ರಿಟಿಷ್ ಸರ್ಕಾರ ನಿರಾಕರಿಸಿತು. ಅದು ಅಲ್ಲದೇ, ಡೆಕ್ಕನ್ ಕ್ಷಾಮ, ಮಹಾರಾಷ್ಟ್ರ ಕ್ಷಾಮ, ಬ್ರಿಟಿಷರ ದೌರ್ಜನ್ಯ ಮತ್ತು ವಸಾಹತುಶಾಹಿ ಶಕ್ತಿಯಿಂದ ನಿರಾಶೆಗೊಂಡು ಬ್ರಿಟಿಷ್ ಆಳ್ವಿಕೆ ಉರುಳಿಸಲು ತಮ್ಮ ಜೀವನವನ್ನು ಮೂಡಿಪಾಗಿಟ್ಟರು. ಅದೇ ರೀತಿ ಗೆರಿಲ್ಲಾ ಯುದ್ಧ ಮತ್ತು ಲೂಟಿ ಕಾರ್ಯಾಚರಣೆಗಳಿಗೆ ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಸಹಾಯ ಮಾಡುತ್ತಾರೆ. ಇವರಿಗೆ ಶಸ್ತ್ರಾಸ್ತ್ರ ತರಭೇತಿ ನೀಡಿ ದೇಶಭಕ್ತಿ ತುಂಬಿದ ಗುರು ಲಹುಜಿ ರಘೋಜಿ ಸಾಳ್ವೆಯವರು.

1879ರಲ್ಲಿ ಫಡ್ಕೆಯವರನ್ನು ಸಂಬಾಜಿ ಸೇತುವೆ ಬಳಿ ಅವರನ್ನು ಬಂಧಿಸಿ, ಬ್ರಿಟಿಷರು ಅವರಿಗೆ ಜೀವವಾಧಿ ಶಿಕ್ಷೆಯನ್ನು ವಿಧಿಸಿದರು. ನಂತರ ಏಡೆನಗೆ ಕಳುಹಿಸಿದರು. ಅಲ್ಲಿ ಫಡ್ಕೆ ಅವರನ್ನು ತೀವ್ರ ದೈಹಿಕ ಹಿಂಸೆಗೆ ಒಳಪಡಿಸಲಾಯಿತು. ಇದರ ಪರಿಣಾಮವಾಗಿ ಅವರು 1883ರಲ್ಲಿ ನಿಧನರಾದರು. ಫಡ್ಕೆಯವರು ತಮ್ಮ ಜೀವಿತಾವಧಿಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಘಟಿತ ಸಶಸ್ತ್ರ ಚಳುವಳಿಗೆ ದಾರಿ ಮಾಡಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ.

ದೀಕ್ಷಿತಾ ನಾಯ್ಕ

# ಪತ್ರಕರ್ತರಾಗಲು ಸಾಮಾಜಿಕ ಜವಾಬ್ದಾರಿ, ಪ್ರಾಮಾಣಿಕತೆ ಮುಖ್ಯ

ಯಲ್ಲಾಪುರ: ಇಂದಿನ ಸಮಾಜದಲ್ಲಿ ಸಾಮಾಜಿಕ ಜವಾಬ್ದಾರಿ ಹಾಗು ಪ್ರಾಮಾಣಿಕತೆ ಅತಿ ಮುಖ್ಯ. ಇದನ್ನು ಪತ್ರಿಕೋದ್ಯಮದ ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಖ್ಯಾತ ಗಾಯಕರಾದ ಶಂಕರ ಶಾನುಭಾಗ ಹೇಳಿದರು.

ಯಲ್ಲಾಪುರದ ವಿಶ್ವದರ್ಶನ ಶಿಕ್ಷಣ ಸಮೂಹದ ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಆವಾರದಲ್ಲಿ ನಡೆದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆಯ ಬಿಡುಗಡೆಯ ಸಮಾರಂಭದಲ್ಲಿ ಮಾತನಾಡುತ್ತಿದ್ದರು.ಜನರು ಇಷ್ಟಪಡುವ ರೀತಿಯಲ್ಲಿ ಸುದ್ದಿ ಪ್ರಕಟಣೆ ಮಾಡಬೇಕು. ಆದರೆ ಸುದ್ದಿಯಲ್ಲಿ ನೈತಿಕತೆ ಇರಬೇಕು. ಸಾಯುವ ಕೊನೆಯ ಗಳಿಗೆಯಲ್ಲಿ ತಾನು ಪ್ರಾಮಾಣಿಕವಾಗಿ ಜೀವನದಲ್ಲಿ ಏನು ಸಾಧಿಸಿಲ್ಲ ಎಂದು ಕಣ್ಣೀರು ಹಾಕುವ ಬದಲು, ಬದುಕಿರುವಾಗಲೇ ಕೆಲಸದಲ್ಲಿ ಹೊಂದಾಣಿಕೆ ಮಾಡಿಕೊಳ್ಳದೆ ದೇಶಕ್ಕಾಗಿ ಕೆಲಸ ಮಾಡಿ ಹುದ್ದೆ ಹಣಕ್ಕಾಗಿ ಅಲ್ಲ. ಸಮಾಜದಲ್ಲಿ ಕೆಟ್ಟದ್ದು ನಡೆಯುವಾಗ ಪತ್ರಕರ್ತರು ಧ್ವನಿ ಎತ್ತಬೇಕು ಎಂದರು.ನಿವೃತ್ತ ಪ್ರಾಂಶುಪಾಲ ಬೀರಣ್ಣ ನಾಯಕ ಮೊಗಟಾ ಮಾತನಾಡಿ ಒಂದು ದೇಶದ ಗುಣಮಟ್ಟ ನೋಡುವುದಾದರೆ ಕಟ್ಟಡ, ತಲಾ ಆದಾಯದ ಮೂಲಕ ಅಲ್ಲ. ಆ ದೇಶದ ಕಲೆ, ಸಾಹಿತ್ಯ, ಸಂಸ್ಕೃತಿಯ ಮೂಲಕ ನೋಡಬಹುದು. ಹಾಗೆ ಪತ್ರಿಕೋದ್ಯಮದ ವಿದ್ಯಾರ್ಥಿಗಳು ತಮ್ಮ ಲೇಖನದ ಮೂಲಕ ಕೌಶಲ್ಯ ಹಾಗು ಕೆಲಸ ಸಾಮರ್ಥ್ಯ ತೋರಿಸಿದ್ದಾರೆ. ನೀರಿನಲ್ಲಿ ಬರೆದ ಅಕ್ಷರ ಕೆಲವೇ ಕ್ಷಣದಲ್ಲಿ ಮಾಯವಾಗುತ್ತದೆ, ಮಣ್ಣಿನಲ್ಲಿ ಬರೆದರೆ ಇನ್ನೊಬ್ಬರು ಮೆಟ್ಟುವವರೆಗು ಇರುತ್ತದೆ ಆದರೆ ಹೃದಯದಲ್ಲಿ ಬರೆದ ಅಕ್ಷರ ಎಂದು ಬರೆದರೆ ಇನ್ನೊಬ್ಬರು ಮೆಟ್ಟುವವರೆಗು ಇರುತ್ತದೆ ಬರೆದರೆ ಇನ್ನೊಬ್ಬರು ಮೆಟ್ಟುವವರೆಗು ಇರುತ್ತದೆಬರೆದರೆ ಇನ್ನೊಬ್ಬರು ಮೆಟ್ಟುವವರೆಗು ಇರುತ್ತದೆ ಆದರೆ ಹೃದಯದಲ್ಲಿ ಬರೆದ ಅಕ್ಷರ ಎಂದು ಮರೆಯಾಗುವುದಿಲ್ಲ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವದರ್ಶನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಗಾಂವ್ಕರ್ ಮಾತನಾಡಿ ಸಮಾಜ ಹೇಗಿದೆ ಎಂಬುದು ತಿಳಿಸುವುದು ಪತ್ರಿಕೆ ಕಾರ್ಯವಲ್ಲ ಸಮಾಜ ಹೇಗಿರಬೇಕು ಎಂಬುದು ಹೇಳುವುದು ಪತ್ರಿಕೆಯ ಕಾರ್ಯ. ಪತ್ರಿಕೋದ್ಯಮದ ವಿದ್ಯಾರ್ಥಿಗಳು ಬಂದು ಒಂದು ತಿಂಗಳಾಗುವಾಗ ತಾವು ಬರೆದ ಪತ್ರಿಕೆ ಅನಾವರಣಗೊಳ್ಳುವುದು ಅತ್ಯಂತ ಸಂತೋಷ ವಿಷಯ. ಮಾಧ್ಯಮ ಕ್ಷೇತ್ರದಲ್ಲಿ ಅವರು ಕೆಲಸ ಮಾಡುವಾಗ ಸಮಯದೊಂದಿಗೆ ಹೇಗೆ ವರ್ತಿಸಬೇಕು ಎಂಬುದು ಹೆಚ್ಚು ತಿಳಿದುಕೊಂಡಿರಬೇಕು. ಶ್ರಮ, ಶ್ರದ್ಧೆ ಹಾಗು ಕೌಶಲ್ಯ ಅಭಿವೃದ್ಧಿ ಪಡಿಸಿಕೊಳ್ಳುವುದು ಉತ್ತಮ ಎಂದರು.

ದೀಪವನ್ನು ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.ಕಾರ್ಯಕ್ರಮದಲ್ಲಿ ಡಾ. ವಿಜಯ ಸಂಕೇಶ್ವರ್ ಮೀಡಿಯಾ ಸ್ಕೂಲ್ ನ ವಿದ್ಯಾರ್ಥಿಗಳು ರಚಿಸಿದ ಪ್ರಯೋಗಿಕ ಪತ್ರಿಕೆಯ ಬಿಡುಗಡೆ ಮಾಡಲಾಯಿತು.ವಿಶ್ವದರ್ಶನ ಕನ್ನಡ ಮಾಧ್ಯಮ ಪ್ರೌಢಶಾಲೆ ಮುಖ್ಯಾಧ್ಯಾಪಕಿ ಮುಕ್ತಾ ಶಂಕರ್ ಮತ್ತು ಕೇಂದ್ರೀಯ ಶಾಲೆಯ ಮುಖ್ಯಾಧ್ಯಾಪಕಿ ಮಹಾದೇವಿ ಭಟ್ ಪತ್ರಿಕೋದ್ಯಮ ಕಾಲೇಜಿನ ಉಪನ್ಯಾಸಕರು ಮತ್ತು ಪತ್ರಿಕೋದ್ಯಮದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

. ಶಿಲ್ಪಾ ಪೂಜಾರಿ ನಿರೂಪಿಸಿದರು. ಜಾನು ಕೋಕರೆ ಸ್ವಾಗತಿಸಿದರು. ಕಾರ್ತಿಕ ಹಳಿಜೋಳ ವಂದಿಸಿದರು.




ಡಾ.ವಿಜಯ್ ಸಂಕೇಶ್ವರ ಮೀಡಿಯಾ ಸ್ಕೂಲ್ ವತಿಯಿಂದ ಪ್ರಾಯೋಗಿಕ ಪತ್ರಿಕೆ ಬಿಡುಗಡೆ ಮಾಡಲಾಯಿತು

# ಸಿ ಎಂ ಎಸ್ ಉಪಗ್ರಹ ಉಡಾವಣೆ ಯಶಸ್ವಿ; ಆತ್ಮ ನಿರ್ಭರತೆ ಪ್ರದರ್ಶಿಸಿದ ಇಸ್ರೋ



ಪೂರ್ವ ಯೋಜನೆಯಂತೆ ಎಲ್ ವಿ ಎಂ 3 ಎಂ 5 ರಾಕೆಟ್ ಸಿ ಎಂ ಎಸ್ ಉಪಗ್ರಹವನ್ನು ಭೂ ಸ್ಥಿರ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿದೆ. ಎಲ್ ವಿ ಎಂ 3 ಎಂ–5 ರಾಕೆಟ್ ತನ್ನ ಆಕಾರ ಮತ್ತು ಸಾಮರ್ಥ್ಯದಿಂದ ಬಾಹುಬಲಿ ಎಂದು ಪ್ರಖ್ಯಾತಿ ಪಡೆದಿದೆ. ಇದು 43.5 ಎತ್ತರವಾಗಿದೆ. ಈ ರಾಕೆಟ್ ಅನ್ನು ಸಂಪೂರ್ಣವಾಗಿ ಸ್ಥಳೀಯವಾಗಿ ನಿರ್ಮಿಸಲಾಗಿದೆ. ಇದು ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಆತ್ಮ ನಿರ್ಭರತೆಯನ್ನು ಸೂಚಿಸುತ್ತದೆ. ಇದು ಭೂ ಸ್ಥಿರ ವರ್ಗಾವಣೆ ಕಕ್ಷೆಗೆ 4000 ಕೆಜಿ ಮತ್ತು ಕಡಿಮೆ ಭೂ ಕಕ್ಷೆಗೆ 8000 ಕೆಜಿ ಉಪಗ್ರಹಗಳನ್ನು ಹೊತ್ತೋಯ್ಯಬಲ್ಲದು. ಈ ಹಿಂದೆ 2014 ರಲ್ಲಿ ಎಲ್ ವಿ ಎಂ ರಾಕೆಟ್ ನ ಮೊದಲ ಮಾದರಿಯನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಗಿತ್ತು.

## ಎಲ್‌ವಿಎಂ-೩ ರಾಕೆಟ್‌ನ ವಿಶೇಷತೆಗಳು

ಎಲ್‌ವಿಎಂ 3 ಇಸ್ರೋದ ಹೊಸ ಅತ್ಯಂತ ಭಾರವಾದ ಉಡಾವಣಾ ವಾಹನವಾಗಿದೆ.

ಇಸ್ರೋ ವಿಜ್ಞಾನಿಗಳು ಎಲ್‌ವಿಎಂ3 ಅನ್ನು ಜಿಯೋಸಿಂಕ್ರೊನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (ಜಿ.ಎಸ್.ಎಲ್.ವಿ) ಎಮ್.ಕೆ 3 ಎಂದೂ ಕರೆಯುತ್ತಾರೆ. ಎಲ್‌ವಿಎಮ್ 3 ಎಮ್5 ಅದರ ಐದನೇ ಕಾರ್ಯಾಚರಣೆಯ ಹಾರಾಟವಾಗಿದೆ.

ಭಾರತವನ್ನು ಚಂದ್ರನ ದಕ್ಷಿಣ ಧ್ರುವದ ಬಳಿ ಯಶಸ್ವಿಯಾಗಿ ಇಳಿದ ಮೊದಲ ದೇಶ ವಾಗಿಸಿದ ಚಂದ್ರಯಾನ–3 ಮಿಷನ್ (2023) ಎಲ್‌ವಿಎಂ3 ರಾಕೆಟ್‌ನ ಹಿಂದಿನ ಪ್ರಮುಖ ಕಾರ್ಯಾಚರಣೆಗಳಾಗಿವೆ.

ಇಸ್ರೋ ಸಾಧನೆ ಶ್ಲಾಘಿಸಿದ ಮೋದಿ – ಭಾರತದ ಬಾಹ್ಯಾಕಾಶ ವಲಯ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು ಹೆಮ್ಮೆ ಪಡುವ ಸಂಗತಿ. ಸಿ ಎಂ ಎಸ್ 3 ಯಶಸ್ವಿ ಉಡಾವಣೆಯು ಭಾರತೀಯ ವಿಜ್ಞಾನಿಗಳ ಶ್ರೇಷ್ಠತೆ ಮತ್ತು ನಾವಿನ್ಯತೆಯನ್ನು ತೋರ್ಪಡಿಸುತ್ತದೆ ಎಂದಿದ್ದಾರೆ

**ಉಡಾವಣಾ ವಾಹನವು ಉಪಗ್ರಹವನ್ನು ನಿಗದಿತ ಕಕ್ಷೆಗೆ ಯಶಸ್ವಿಯಾಗಿ ಕೂರಿಸಿದೆ. ಈ ರಾಕೆಟ್‌ನ ಹಿಂದಿನ ಉಡಾವಣೆಯಾದ ಚಂದ್ರಯಾನ–3 ದೇಶಕ್ಕೆ ಹೆಮ್ಮೆ ತಂದಿತ್ತು. ಈಗ ಅತಿ ಭಾರದ ಉಪಗ್ರಹವನ್ನು ಕೊಂಡೊಯ್ಯುವ ಮೂಲಕ ಮತ್ತೊಂದು ಹೆಮ್ಮೆ ತಂದಿದೆ.**

## ಸಿಎಂಎಸ್ ಉಪಗ್ರಹ ಹೊತ್ತೊಯ್ದ ಬಾಹುಬಲಿ :

ಪೂರ್ವ ಯೋಜನೆಯಂತೆ ಎಲ್ ವಿ ಎಂ 3 ಎಂ 5 ರಾಕೆಟ್ ಸಿ ಎಂ ಎಸ್ ಉಪಗ್ರಹವನ್ನು ಭೂ ಸ್ಥಿರ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿದೆ. ಎಲ್ ವಿ ಎಂ 3 ಎಂ–5 ರಾಕೆಟ್ ತನ್ನ ಆಕಾರ ಮತ್ತು ಸಾಮರ್ಥ್ಯದಿಂದ ಬಾಹುಬಲಿ ಎಂದು ಪ್ರಖ್ಯಾತಿ ಪಡೆದಿದೆ. ಇದು 43.5 ಎತ್ತರವಾಗಿದೆ. ಈ ರಾಕೆಟ್ ಅನ್ನು ಸಂಪೂರ್ಣವಾಗಿ ಸ್ಥಳೀಯವಾಗಿ ನಿರ್ಮಿಸಲಾಗಿದೆ. ಇದು ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಆತ್ಮ ನಿರ್ಭರತೆಯನ್ನು ಸೂಚಿಸುತ್ತದೆ. ಇದು ಭೂ ಸ್ಥಿರ ವರ್ಗಾವಣೆ ಕಕ್ಷೆಗೆ 4000 ಕೆಜಿ ಮತ್ತು ಕಡಿಮೆ ಭೂ ಕಕ್ಷೆಗೆ 8000 ಕೆಜಿ ಉಪಗ್ರಹಗಳನ್ನು ಹೊತ್ತೋಯ್ಯಬಲ್ಲದು. ಈ ಹಿಂದೆ 2014 ರಲ್ಲಿ ಎಲ್ ವಿ ಎಂ ರಾಕೆಟ್ ನ ಮೊದಲ ಮಾದರಿಯನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಗಿತ್ತು.

# “ಕೈ ಹಿಡಿದು ನಡೆಸಿದವರಿಗೆ ಆಸರೆಯಾಗೋಣ”

ಅರ್ಚನಾ.ನಾಯ್ಕ

ಮಾನವ ಜನ್ಮ ಅತಿ ದೊಡ್ಡದು. ಆ ಜನ್ಮ ನಮಗೆ ದೊರೆಯಲು ಕಾರಣ ನಮ್ಮ ತಂದೆ ತಾಯಿ. ಹುಟ್ಟಿನಿಂದ ಬೆಳೆದು ದೊಡ್ಡವರಾಗುವರೆಗೂ ತಮ್ಮ ಸರ್ವಸ್ವವನ್ನು ಮಕ್ಕಳಿಗೆ ಧಾರೆ ಎರೆಯುತ್ತಾರೆ. ತಾವು



ಒಂದು ಹೊತ್ತು ಉಪವಾಸವಿದ್ದರೂ ಮಕ್ಕಳನ್ನು ಸಂತೃಪ್ತಗೊಳಿಸುತ್ತಾರೆ. ಮಕ್ಕಳ ಏಳಿಗೆಗಾಗಿ ಹಗಲು ರಾತ್ರಿ ಎನ್ನದೆ ಕಷ್ಟ ಪಟ್ಟು ದುಡಿದು ಅವರಿಗೆ ತಮ್ಮ ಜೀವನವನ್ನೇ ಮುಡಿಪಾಗಿ ಇಡುತ್ತಾರೆ.

ಮಕ್ಕಳು ತಮ್ಮ ಹಾಗೆ ಶ್ರಮಿಕರಾಗುವುದು ಬೇಡ, ಕಷ್ಟ ಪಡುವುದು ಬೇಡ,ಓದಿ ವಿದ್ಯಾವಂತರಾಗಿ ಒಳ್ಳೆಯ ಹುದ್ದೆಗೆ ಸೇರಲಿ ಎಂಬುದು ಎಲ್ಲ ತಂದೆ ತಾಯಿಯರ ಕನಸು. ಅವರನ್ನು ಚೆನ್ನಾಗಿ ಓದಿಸಿ ಶಿಕ್ಷಣವಂತರನ್ನಾಗಿಸುತ್ತಾರೆ. ಆದರೆ ಬೆಳೆದು ದೊಡ್ಡವರಾದ ಮಕ್ಕಳು ಇಷ್ಟೆಲ್ಲಾ ನೀಡಿದ ತಂದೆ ತಾಯಿಯನ್ನು ಕಡೆಗಣಿಸುತ್ತಾರೆ. ಅವರ ಬಗ್ಗೆ ಕಾಳಜಿ ವಹಿಸುವುದಿಲ್ಲ. ಎಲ್ಲಿಯಾದರೂ ಅವರಿಗೆ

ಅನಾರೋಗ್ಯ ಕಾಡಿದರೆ ಸಕಾಲದಲ್ಲಿ ಚಿಕಿತ್ಸೆ ಕೊಡಿಸಬೇಕು ಎಂಬುದರ ಬಗ್ಗೆ ಯೋಚಿಸುವುದಿಲ್ಲ.

ಹೆತ್ತವರಿಗೆ ಮಕ್ಕಳು ಎಂದು ಭಾರವೆನಿಸಲಾರರು, ಆದರೆ ಬೆಳೆದು ನಿಂತ ಮಕ್ಕಳಿಗೆ ಮಾತ್ರ ತಮ್ಮ ಪಾಲಕರು ಹೊರೆಯಾಗುತ್ತಾರೆ. ಅವರನ್ನು ನೋಡಿಕೊಳ್ಳುವುದು ಕಷ್ಟವಾಗಿ ಬಿಡುತ್ತದೆ. ಮದುವೆಯಾದ ತಮ್ಮ ಸಂಗಾತಿಯ ಮಾತನ್ನು ಕೇಳಿಕೊಂಡು ತಮ್ಮ ತಂದೆ ತಾಯಿಯನ್ನೇ ದೂರವಿಡುತ್ತಾರೆ. ಅವರನ್ನು ವೃದ್ಧಾಶ್ರಮಕ್ಕೆ ತಳ್ಳುತ್ತಾರೆ. ಕೊನೆಗಾಲದಲ್ಲಿ ದೊರೆಯಬೇಕಾದ ಪ್ರೀತಿ ಕಾಳಜಿಯಿಂದ ಅವರು ವಂಚಿತರಾಗುತ್ತಾರೆ.

ಹೆತ್ತವರು ತಮ್ಮ ಮಕ್ಕಳು ಓದಿ ಸಂಸ್ಕಾರವಂತರಾಗಿ ಎಂದು ಭಾವಿಸಿದರೆ, ವಿದ್ಯೆ ಹಾಗು ಹಣದ ಅಮಲಿನಲ್ಲಿ ಮಾನವೀಯ ಮೌಲ್ಯವನ್ನೇ ಮರೆತ ಇಂದಿನ ಪೀಳಿಗೆಯ ಜನರು ಪಾಲಕರನ್ನೇ ದೂರ ತಳ್ಳುತ್ತಾರೆ. ಅವರನ್ನು ಒಂಟಿಯಾಗಿಸುತ್ತಾರೆ.ಆ ಹಿರಿಯ ಜೀವಗಳು ಆಸ್ತಿ ಹಣವನ್ನು ಬಯಸುವುದಿಲ್ಲ, ಬದಲಾಗಿ ತಮ್ಮೊಂದಿಗೆ ಮಕ್ಕಳು ಸ್ವಲ್ಪ ಸಮಯ ಕಳೆಯಲಿ ಎಂದು ಬಯಸುತ್ತಾರೆ. ಆದ್ದರಿಂದ ಅವರ ಮುಪ್ಪಿನ ಕಾಲದಲ್ಲಿ ಹೆಚ್ಚು ಕಾಳಜಿ ವಹಿಸಿ ಅವರಿಗೆ ಸಂತೋಷವನ್ನು ನೀಡುವುದು ಪ್ರತಿ ಮಕ್ಕಳ ಕರ್ತವ್ಯ. ನಮ್ಮ ಕೈ ಹಿಡಿದು ನಡೆಸಿದವರಿಗೆ ಆಸರೆಯಾಗೋಣ.

# ನಾಳೆಯ ಕನಸುಗಳ ಶಿಲ್ಪಿಗಳು

ಯುವಜನತೆ ಎಂದರೆ ಕೇವಲ ವಯಸ್ಸಿನಲ್ಲಿ ಯೌವ್ವನದಲ್ಲಿರುವವರು ಮಾತ್ರವಲ್ಲ, ಬದಲಾಗುತ್ತಿರುವ ಜನತೆ. ಯುವಕರಲ್ಲಿ ಎಲ್ಲಿಲ್ಲದ ಉತ್ಸಾಹ, ಶಕ್ತಿ, ಕನಸುಗಳು, ಹೊಸದನ್ನು ಕಲಿಯುವ ಉತ್ಸಾಹದ ಮೂಲಕ ಸಮಜದ ಮೆಟ್ಟಲುಗಳನ್ನು ಏರಿರುವ ಶಿಲ್ಪಿಗಳು.ಯುವಕರು ಸಮಾಜದ ನಾಳೆಯ ಕನಸುಗಳ ಆಶಾದೀಪವಾಗಿದ್ದು, ಅವರ ಕಣ್ಣಲ್ಲಿ ಬೆಳಗುವ ಕನಸುಗಳು ಕಟ್ಟುವ ಮೂಲಕ ದೇಶದ ಬದಲಾವಣೆಗೆ ಕಾರಣಕರ್ತರು.

ಯುವಕರು ದೇಶದ ಅಭಿವೃದ್ಧಿ, ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಎಲ್ಲ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಯುವಕರ ಪಾತ್ರಕ್ಕೆ ಮಹತ್ವ. ಮಹಾತ್ಮ ಗಾಂಧಿಜಿ, ಸ್ವಾಮಿ ವಿವೇಕಾನಂದರು ಇವರು ಯುವಜನತೆಯ ಶಕ್ತಿ ಮತ್ತು ಪ್ರೇರಣೆಗೆ ಉದಾಹರಣೆ ಎಂದರು. ಸ್ವಾಮಿ ವಿವೇಕಾನಂದರು ಮಾತು “ನನಗೆ ಹತ್ತಾರು ಯೋಗ್ಯ ಯುವಕರು ಸಿಕ್ಕರೆ, ನಾನು ಭಾರತವನ್ನು ಬದಲಾಯಿಸುತ್ತೇವೆ ಎಂಬ ಮಾತು ಇಂದಿಗೂ ಅರ್ಥಪೂರ್ಣವಾಗಿದೆ.

ಯುವಕರು ಕೇವಲ ಭವಿಷ್ಯವಲ್ಲ, ಅವರು ವರ್ತಮಾನದ ಆರಂಭಿಕರು. ಅವರ ಕೈಯಲ್ಲಿ ದೇಶ ಬದಲಾವಣೆಯ ಕೀಲಿಯಿದೆ. ವಿಜ್ಞಾನದಲ್ಲಿ ಹೊಸತು ಹುಡುಕುವಾಗ, ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವುದು, ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದರ ಮೂಲಕ ರಾಷ್ಟ್ರದ ಗೌರವವನ್ನು ಹೆಚ್ಚಿಸುತ್ತಾರೆ. ಇಂದಿನ ಯುವಜನತೆ ತಂತ್ರಜ್ಞಾನ, ಶಿಕ್ಷಣ, ಉದ್ಯಮಶೀಲತೆಯಲ್ಲಿ ಹೊಸ ಪ್ರಪಂಚವನ್ನು ನಿರ್ಮಿಸುತ್ತಿದ್ದಾರೆ.

ಆದರೆ, ಈ ಶಕ್ತಿ ಸರಿಯಾಗಿ ಸಾಗದಿದ್ದರೆ ಅದು ವಿಫಲವಾಗುತ್ತದೆ. ಇಂದಿನ ಯುವಕರ ಮುಂದೆ ಅನೇಕ ಸವಾಲುಗಳಿವೆ – ನಿರುದ್ಯೋಗ, ಮಾದಕ ವಸ್ತುಗಳ ಬಳಕೆ, ಸಾಮಾಜಿಕ ಮಾಧ್ಯಮದ ದುರುಪಯೋಗ, ನೈಜ ಮೌಲ್ಯಗಳು ಇತ್ಯಾದಿ. ಯುವಕರು ಇವುಗಳಿಂದ ದೂರವಿದ್ದು, ಆತ್ಮ,ಶ್ರದ್ಧೆ, ಶಿಸ್ತಿನ ಜೀವನ,ಸೇವಾಭಾವದಿಂದ ನಡೆದುಕೊಂಡರೆ ಮಾತ್ರ ಯುವಕರು ನಿಜವಾದ ದೇಶಭಕ್ತರು ಆಗಬಹುದು.

ಯುವಕರು ದೇಶದ ಭವಿಷ್ಯ ಮಾತ್ರವಲ್ಲ, ಅದರ ದಿಕ್ಕನ್ನು ತೋರಿಸುವ ಶಕ್ತಿ. ಇಂದಿನ ಶಿಕ್ಷಣ ವ್ಯವಸ್ಥೆ ಯುವಕರಲ್ಲಿ ಹೆಚ್ಚಿನ ಕೌಶಲ್ಯ, ಚಿಂತನೆ ಮತ್ತು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಬೇಕು.. ಕೇವಲ ಪದವಿ ಪಡೆದರೆ ಸಾಲದು; ಸಮಾಜದ ಸಮಸ್ಯೆಗಳನ್ನು ಪರಿಹರಿಸುವ ಬುದ್ಧಿ ಮತ್ತು ಮನಸ್ಸಿನ ಶಕ್ತಿಯನ್ನು ಬಳಸಬೇಕು. ಯುವಕರ ಕೈಯಲ್ಲಿ ಅನೇಕ ರೀತಿಯ ತಂತ್ರಜ್ಞಾನವಿದೆ, ಆದರೆ ಅದರ ಜೊತೆ ಮೌಲ್ಯಗಳು ಮತ್ತು ಮಾನವೀಯತೆ ಇರಬೇಕು.

ಗ್ರಾಮಾಭಿವೃದ್ಧಿ, ಪರಿಸರ ಸಂರಕ್ಷಣೆ, ಸ್ವಚ್ಛತಾ ಅಭಿಯಾನ, ಮತ್ತು ಮಹಿಳಾ ಸಬಲೀಕರಣ, ಹೀಗೆ ಮುಂತಾದ ಕ್ಷೇತ್ರಗಳಲ್ಲಿ ಯುವಕರು ತಮ್ಮ ಪಾತ್ರವನ್ನು ನಿರ್ವಹಿಸಿದಾಗ ನಿಜವಾದ ಬದಲಾವಣೆ ಆಗುತ್ತದೆ. ಇಂದು ಅನೇಕ ಯುವ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು ಸಮಾಜದಲ್ಲಿ ಹೊಸ ರೀತಿಯ ಬದಲಾವಣೆಯ ಬೀಜ ಬಿತ್ತುತ್ತಿವೆ. ಇದು ಯುವಜನತೆಯ ಸಾಮಾಜದ ಜವಬ್ದಾರಿಗೆ ಜೀವಂತ ಉದಾಹರಣೆ.

ಯುವಕರು ರಾಷ್ಟ್ರದ ಶಕ್ತಿ, ಆದರೆ ಆ ಶಕ್ತಿಗೆ ನೈತಿಕ ದಿಕ್ಕು ಬೇಕು. ನೈತಿಕತೆ, ಶಿಸ್ತಿನ ಜೀವನ, ಸಹಾಯ ಸಹಕಾರ,ದೇಶಭಕ್ತಿ ಇವುಗಳ ಮೇಲೆ ಯುವಜನತೆಯ ಆಧಾರವಾಗಿದೆ. ಇಂದು ದೇಶದ ಪ್ರಗತಿ ಕೇವಲ ಸರ್ಕಾರದ ಬಂದಿದ್ದಲ್ಲ ಯುವಜನತೆಯ ಮೇಲೆ ಉತ್ಸಾಹ ಮತ್ತು ಕೃತ್ಯಗಳ ಮೇಲೆ ಅವಲಂಬಿತವಾಗಿದೆ.

ನಮ್ಮ ಸಂವಿಧಾನದಲ್ಲಿ ಯುವಕರಿಗೆ ತಮ್ಮ ಪ್ರತಿಭೆಯನ್ನು ಹೊರಹಾಕುವ,ದೇಶದ ನಿರ್ಧಾರಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ನೀಡಿದೆ ಮತ್ತು ಅದನ್ನು ಸದುಪಯೋಗಪಡಿಸಿಕೊಂಡು ಯುವಕರು ಸಮಾಜದ ಒಳಿತಿಗಾಗಿ ದುಡಿಯಬೇಕು. ದೇಶದ ಪ್ರತಿಯೊಬ್ಬ ಯುವಕನ ಹೃದಯದಲ್ಲಿ ‘ನಾನು ಏನು ಕೊಡಬಲ್ಲೆ?’, ‘ನಾನು ಏನು ಮಾಡಬಲ್ಲೆ?’ ಎಂಬ ಪ್ರಶ್ನೆ ಮೂಡಿದಾಗ ನಿಜವಾದ ಬೆಳೆವಣಿಗೆ ದಾರಿ ತೆರೆಯುತ್ತದೆ.

ಅಂತಿಮವಾಗಿ ಹೇಳಬೇಕಾದರೆ, ಯುವಜನತೆಯೇ ನಾಳೆಯ ಕನಸುಗಳ ಶಿಲ್ಪಿಗಳು. ಅವರ ಹೃದಯದ ಉತ್ಸಾಹ, ಬುದ್ಧಿಯ ಚುರುಕುತನ, ಮತ್ತು ನೈತಿಕ ಶಕ್ತಿ ಭಾರತದ ಭವಿಷ್ಯವನ್ನು ಹೊಳೆಯುವ ಸೂರ್ಯನಂತೆ ಬೆಳಗಿಸುತ್ತದೆ. ಪ್ರತಿಯೊಬ್ಬ ಯುವಕ ತನ್ನೊಳಗಿನ ಶಕ್ತಿಯನ್ನು ಅರಿತು, ನಿಷ್ಠೆಯಿಂದ, ಸತ್ಯದಿಂದ, ಶ್ರಮದಿಂದ ಬದುಕಿದರೆ – ನಾಳೆಯ ಭಾರತ ವಿಶ್ವದ ಮಾದರಿ ರಾಷ್ಟ್ರವಾಗುವುದು ಖಚಿತ.

ಮನೋಜ ಭಟ್ಟ

ಪ್ರಧಾನ ಸಂಪಾದಕ: ಹರಿಪ್ರಕಾಶ ಕೋಣೆಮನೆ, ಸಹಾಯಕ ಸಂಪಾದಕ: ವಿನಯ ಹೆಗಡೆ, ವೆಂಕಟೇಶ ಗೇರಗದ್ದೆ, ಸ್ಫೂರ್ತಿ ಹೆಗಡೆ. ಪೂಜಾ ಹುನಕುಪ್ಪಿ, ವಿದ್ಯಾರ್ಥಿ ಸಂಪಾದಕರು: ದೀಕ್ಷಿತಾ ನಾಯ್ಕ, ಅರ್ಚನಾ ನಾಯ್ಕ, ಶಶಿಧರ ಮರಾಠಿ, ಮನೋಜ ಭಟ್ಟ
ವಿಳಾಸ: ವಿಶ್ವದರ್ಶನ ಶಿಕ್ಷಣ ಸಂಸ್ಥೆ ಗಣೇಶಪುರಂ, ಯಲ್ಲಾಪುರ. ಸಂಪುಟ–3 ಸಂಚಿಕೆ–4